ಒ ಎಸ್ ನಂ.290/2012
ಡಿ.ಡಬ್ಲ್ಯೂಃ 7 ಹಾಜರು

ದಿನಾಂಕಃ 26-02-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀಯುತ ಎನ್ ಎಸ್ ಜಿ ವಕೀಲರಿಂದಃ

ಈ ದಿನ ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನೀಡಿದ್ದು ಅದರಲ್ಲಿ ಹೇಳಿರುವ ಅಂಶಗಳೆಲ್ಲವು ಸರಿಯಿದ್ದು ಅದನ್ನು ನಾನೇ ಹೇಳಿ ಬರೆಸಿದ್ದು ಅದಕ್ಕೆ ನನ್ನ ಸಹಿ ಕೂಡಾ ಇರುತ್ತದೆ.

ನಿಡಿ-127 ನ್ನು ನಾನೇ ಬರೆದಿದ್ದು ಅದರ ಮೇಲೆ ಕಂಡು ಬರುವ ಸಹಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಡಿ-127 ಎಫ್ ಎಂದು ಗುರುತಿಸಲಾಯಿತು. ನಿಡಿ-127 (ಬಿ) ಮತ್ತು (ಸಿ) ಪ್ರತಿವಾದಿ ನಂ. 1 ಮತ್ತು 11 ಇವರದ್ದು ಆಗಿರುತ್ತದೆ.

ಪಾಟೀ ಸವಾಲು ಶ್ರೀಯುತ ಎಸ್ ವಿ ಡಿ ವಕೀಲರಿಂದಃ
ವಾದಿಯ ಪರವಾಗಿಃ

ನನ್ನ ಊರು ಮೂಲತಃ ಗೋಕಾಕ ಎಂದರೆ ಸರಿ. ನನಗೆ ಅಂಕದವರ ಕುಟುಂಬ ಮೊದಲಿನಿಂದಲೂ ಗೊತ್ತು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ನಡುವೆ ವಾಟ್ನಿಯಾಗಿದೆಯೊ ಅಥವಾ ಇಲ್ಲ ಎಂಬುದು ನನಗೆ ಗೊತ್ತಿಲ್ಲ. ನಿಡಿ-127 ರಲ್ಲಿ ಕಾಣಸಿದ ಆಸ್ತಿ ವಾದಿ ಮತ್ತು ಪ್ರತಿವಾದಿಗಳ ಹಿರಿಯರು ಆಸ್ತಿ ಅಥವಾ ಸ್ವಯ್ತಾಜಿರ್ ಆಸ್ತಿ ಎಂಬುದು ನನಗೆ ಗೊತ್ತಿಲ್ಲ. ಮೊದಲನೆ ಪ್ರತಿವಾದಿ ಹೇಳಿದ್ದರ ಮೇರೆಗೆ ನಾನು ನಿಡಿ-127 ನ್ನು ಬರೆದಿದ್ದೇನೆ ಎಂದರೆ ಸರಿ.

15 ರಿಂದ 17 ರವರ ಪರ ವಕೀಲರು ಮೇಲೆ ಹೆಳಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

10 ನೇ ಪ್ರತಿವಾದಿ ಪರ ವಕೀಲರು ತಮ್ಮ ಪರವಾಗಿ ಪಾಟೀ ಸವಾಲು ಇಲ್ಲವೆಂದು ತಿಳಿರಸಿರುತ್ತಾರೆ.

ಪ್ರತಿವಾದಿ ನಂ.2, 4, 7, 8 ಮತ್ತು 19 ರವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು. ಕಾರಣ ಪಾಟೀ ಸವಾಲನ್ನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ

ದಿನಾಂಕಃ 26-02-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಸ್ ವಿ ಡಿ ವಕೀಲರಿಂದಃ
ವಾದಿಯ ಪರವಾಗಿಃ

1. ನಾನು ಮತ್ತು 11 ನೇ ಪ್ರತಿವಾದಿ ಸಹಪಾಟಿಗಳು ಎಂದರೆ ಸರಿ. ಈ ದಾವೆಯಲ್ಲಿ ಎಷ್ಟು ಆಸ್ತಿಗಳು ಇವೆ ಎಂಬುದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ಮೂಲ ಉದ್ಯೋಗ ಏನು ಇತ್ತು ಎಂಬುದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ಮೂಲ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ವಾಟ್ನಿಯಾಗಿದೆ ಅಥವಾ ಇಲ್ಲ ಎಂಬುದು ನನಗೆ ಗೊತ್ತಿಲ್ಲ. ಆದರೆ ಅವರು ಬೇರೆ ಬೇರೆ ಉದ್ಯೋಗ ಮಾಡಿಕೊಂಡಿರುತ್ತಾರೆ. ನಿಡಿ-137 ರಲ್ಲಿ ತೋರಿಸಿದ ಆಸ್ತಿ ಹೇಗೆ ಬಂದಿತ್ತು ಎಂಬುದು ಸಹ ನನಗೆ ಗೊತ್ತಿಲ್ಲ. ನನಗೆ ವಾದಿ ಮತ್ತು ಪ್ರತಿವಾದಿಗಳ ಯಾರು ಯಾರು ಮತ್ತು ಯಾರ ಜೊತೆ ಇರುತ್ತಾರೆ ಮತ್ತು ಅವರ ಕುಟುಂಬದ ಬಗ್ಗೆ ಮಾಹಿತಿ ಇರುತ್ತಾರೆ. ಮೊದಲನೆ ಪ್ರತಿವಾದಿ ಪ್ರತಿವಾದಿ ನಂ.2 ರಿಂದ 4 ಹಾಗೂ ಮೃತ ಬಸವರಾಜ ರವರ ಜೊತೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೊದಲನೆ ಪ್ರತಿವಾದಿ ವಾದಿಯ ಜೊತೆಗೂ ಸಹ ಹೋಗಿ ಬಂದು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿ ಇರುವ ಅಂಗಡಿಯಲ್ಲಿ ಇರುತ್ತಾರೆ. ನಿಡಿ-137 ರ ವ್ಯವಹಾರ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ನಿಡಿ-137 ಕ್ಕೆ ಮೊದಲನೆ ಪ್ರತಿವಾದಿ ನನಗೆ ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ನನಗೆ ಅದನ್ನು ಮೊದಲನೆ ಪ್ರತಿವಾದಿ ಮಾಡಿಕೊಡಲು ಹಕ್ಕು ಇತ್ತು ಅಥವಾ ಇಲ್ಲ ಎಂಬುದು ನನಗೆ ಗೊತ್ತಿಲ್ಲ. ನಿಡಿ-137 ಕ್ಕೆ ಮೊದಲನೆ ಪ್ರತಿವಾದಿ ನನಗೆ ಸಹಿ ಮಾಡು ಎಂದು ಕೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು 11 ನೇ ಪ್ರತಿವಾದಿಯ ಕೋರಿಕೆ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನ್ಯಾಯಾಲಯದಿಂದ ಸಮನ್ಸ ಬಂದಿತ್ತು ಎಂದು ನುಡಿದಿರುತ್ತಾರೆ.

<u>ಒ ಎಸ್ ನಂ.290/2012</u>
<u>ಡಿ.ಡಬ್ಲ್ಯೂ: 6 ಹಾಜರು</u>

15 ರಿಂದ 17 ನೇ ಪ್ರತಿವಾದಿಗಳು ಮೇಲೆ ಹೇಳಿದ ಪಾಟೀ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

ಪ್ರತಿವಾದಿ ನಂ.2, 4, 7, 8, 19 ರವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು. ಪ್ರತಿನಿಧಿಸಿಲ್ಲ, ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

10 ನೇ ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ